

‘ಹೌದು ಫಾದರ್. ಹಾಗೆಂದುಕೊಂಡಿದ್ದೇನೆ.’

‘ಅಂದರೆ ನೀನು ಅಯ್ಯಪ್ಪನನ್ನು ದೇವರೆಂದು ನಂಬ್ತೀಯಾ?’

‘ನಾನು ಆ ಬಗ್ಗೆ ಯೋಚಿಸಿಲ್ಲ ಫಾದರ್. ಕ್ರಿಶ್ಚಿಯನ್ನರು ಶಬರಿಮಲೆಗೆ ಹೋಗಬಾರದೆಂದೇನಾದರೂ ಇದೆಯೇ?’

‘ನಾವು ಕ್ರಿಶ್ಚಿಯನ್ನರು. ನಮ್ಮ ದೇವರು ಯೆಹೋವಾ. ಅವನು ತನ್ನ ಪುತ್ರ ಜೀಸಸನ್ನು ತನ್ನ ಪ್ರತಿನಿಧಿಯಾಗಿ ಭೂಲೋಕಕ್ಕೆ ಕಳುಹಿಸಿದ್ದಾನೆ. ನಾವೆಲ್ಲಾ ನಂಬಬೇಕಾದದ್ದು ಏಸು ಕ್ರಿಸ್ತರನ್ನು. ಅವರು ನಮಗಾಗಿ ಪ್ರಾಣತ್ಯಾಗ ಮಾಡಿದ್ದಾರೆ. ಜೀಸಸ್‌ನ ಅನುಯಾಯಿಗಳು ಅನ್ಯ ದೇವರಲ್ಲಿ ವಿಶ್ವಾಸವಿರಿಸುವುದನ್ನು ಚರ್ಚು ಸಹಿಸುವುದಿಲ್ಲ’.

ಗಿಲ್ಬರ್ಟ್ ವಿನೀತನಾಗಿ ಕೈಮುಗಿದ.

‘ಫಾದರ್, ನನಗೆ ಜೀಸಸ್‌ನಲ್ಲಿ ವಿಶ್ವಾಸವಿದೆ. ಆದರೆ ನಲುವತ್ತೆಂಟು ದಿನಗಳ ವ್ರತ, ಪಂಪಾದಿಂದ ಶಬರಿಮಲೆಯವರೆಗಿನ ಕಾಲ್ನಡಿಗೆ ಒಂದು ದೊಡ್ಡ ಸಾಹಸವಾಗಿ ಕಂಡಿದೆ. ನಾನೂ ಆ ಸಾಹಸ ಮಾಡಬೇಕೆಂದಿದ್ದೇನೆ. ದಯವಿಟ್ಟು ಅನುಮತಿ ನೀಡಿ ಫಾದರ್’.

‘ಅದು ಸಾಧ್ಯವಿಲ್ಲ. ನೀನು ಹಾಕಿದ ಮಾಲೆ ತೆಗೆದುಬಿಡು. ಇಲ್ಲದಿದ್ದರೆ ಗಂಭೀರ ಸಮಸ್ಯೆ ಎದುರಿಸ್ತೀಯಾ?’

ಗಿಲ್ಬರ್ಟ್ ಬೇಡಿಕಂಡ.

‘ಬೇಡಿ ಫಾದರ್. ಹಾಗೆ ಹೇಳಬೇಡಿ. ಒಮ್ಮೆ ಹಾಕಿದ ಮಾಲೆ ತೆಗೆಯುವುದು ಶಬರಿಮಲೆ ವ್ರತ ಮುಗಿದ ಮೇಲೆಯೇ. ನಾನು ಎಂದೆಂದಿಗೂ ಏಸುವಿಗೆ ನಿಷ್ಠನೆ. ಒಂದು ಭಿನ್ನ ಅನುಭವಕ್ಕಾಗಿ ಶಬರಿಮಲೆಗೆ ಹೋಗುತ್ತಿದ್ದೇನೆ’.

‘ನಾನು ಹೇಳಿದಂತೆ ನೀನು ಕೇಳದಿದ್ದರೆ ನಿನಗೆ ಬಹಿಷ್ಕಾರ ಹಾಕಬೇಕಾಗುತ್ತದೆ’.

ಫಾದರ್ ದುರ್ದಾನ ತೆಗೆದುಕೊಂಡವರಂತೆ ದುಡು ದುಡು ಒಳನಡೆದರು.

ಗಿಲ್ಬರ್ಟ್ ತಲೆ ಕೆಡಿಸಿಕೊಳ್ಳಲಿಲ್ಲ. ನಲವತ್ತೆಂಟು ದಿನಗಳ ವ್ರತ ಆಚರಿಸಿದ. ವ್ರತಧಾರಿಗಳೊಡನೆ ಶಬರಿಮಲೆಗೆ ಹೋಗಿಯೂ ಬಂದ. ಊರಿಗೆ ಸಾಮೂಹಿಕ ಅನ್ನಸಂತರ್ಪಣೆಗೆ ತನ್ನ ದೇಣಿಗೆಯನ್ನು ನೀಡಿದ. ಫಾದರ್ ಅವನನ್ನು ಚರ್ಚಿನಿಂದ ಉಚ್ಚಾಟಿಸಿಯೇ ಬಿಟ್ಟರು.

ಗಿಲ್ಬರ್ಟ್ ತಲೆ ಕೆಡಿಸಿಕೊಳ್ಳಲಿಲ್ಲ. ಮನೆಗೆ ಹೋಗಿ ಸ್ವಲ್ಪ ಹೊತ್ತು ಚಿಂತಿಸಿದ. ಊರಿನ ಹೊರಗೆ ಎರಡೆಕರೆ ರೆವಿನ್ಯೂ ಭೂಮಿಗೆ ಬೇಲಿ ಹಾಕಿ ಕಂಗು–ತೆಂಗು ನೆಟ್ಟು ಕೃಷಿ ಮಾಡಿದ. ಆದರೆ ಅವನನ್ನು ಮದುವೆಯಾಗಲು ಯಾವ ಕ್ರಿಶ್ಚಿಯನ್ ಹುಡುಗಿಯೂ ಒಪ್ಪಲಿಲ್ಲ.

ಆ ಊರಿನ ಹುಡುಗಿಯೊಬ್ಬಳು ನರ್ಸಿಂಗ್ ಮಾಡಿ ಅಲ್ಲೇ ಸರಕಾರಿ ಮಿಡ್‌ವೈಫ್ ಆಗಿ ಕೆಲಸ ಮಾಡುತ್ತಿದ್ದಳು. ಅವಳಿಗೆ ಗಿಲ್ಬರ್ಟ್‌ನ ಏಕಾಕಿತನ ನೋಡಿ ಮರುಕ ಉಂಟಾಯಿತು. ಗಿಲ್ಬರ್ಟ್ ಸುಂದರ ಪುರುಷನಾಗಿದ್ದ. ಗಾರೆ ಕೆಲಸ, ಅಡಿಕೆ–ತೆಂಗಿನಕಾಯಿ ಎಂದು ಸಾಕಷ್ಟು ಗಳಿಸುತ್ತಿದ್ದ. ಅವಳಾಗಿಯೇ ಒಂದು ದಿನ ಅವನಲ್ಲಿ ಮದುವೆಯ ಪ್ರಸ್ತಾಪ ಮಾಡಿದಳು. ನರ್ಸಮ್ಮಳೂ ಚೆಲುವೆಯಾಗಿದ್ದು ಸರಕಾರಿ ಸಂಬಳ ಪಡೆಯುವವಳು. ಗಿಲ್ಬರ್ಟ್ ಹೆಚ್ಚು ಯೋಚನೆ ಮಾಡದೆ ಒಪ್ಪಿಕೊಂಡ. ಊರ ಅಯ್ಯಪ್ಪ ಭಕ್ತರೆಲ್ಲ ಸೇರಿ ಗಿಲ್ಬರ್ಟ್ ಮತ್ತು ನರ್ಸಮ್ಮಳ ಮದುವೆ ಮಾಡಿದರು. ಕ್ರಿಶ್ಚಿಯನ್ನನನ್ನು ಮದುವೆಯಾದುದಕ್ಕೆ ನರ್ಸಮ್ಮಳನ್ನು ಮನೆಯಿಂದ ಹೊರಗೆ ಹಾಕಿದರು. ಆರ್ಥಿಕವಾಗಿ ಸಬಲವಾಗಿದ್ದ ಜೋಡಿಯ ಸಂಸಾರ ಸುಖವಾಗಿಯೇ ಸಾಗಿತು.

ಈ ನಡುವೆ ಚರ್ಚ್ ಫಾದರ್‌ಗೆ ಬೇರೆ ಊರಿಗೆ ಟ್ರಾನ್ಸ್‌ಫರ್ ಆಯಿತು. ಹೊಸ ಫಾದರ್‌ಗೆ ಗಿಲ್ಬರ್ಟ್‌ನ ವಿಷಯ ತಿಳಿದು ವೇದನೆಯಾಯಿತು. ಅವರು ಒಂದು ದಿನ ನೇರವಾಗಿ ಗಿಲ್ಬರ್ಟ್‌ನ ಮನೆಗೇ ಬಂದುಬಿಟ್ಟರು. ಗಿಲ್ಬರ್ಟ್ ಮತ್ತು ನರ್ಸಮ್ಮ ಅವರನ್ನು ಸ್ವಾಗತಿಸಿ ಉಪಚರಿಸಿದರು.

‘ಗಿಲ್ಬರ್ಟ್, ಹೇಗಿದ್ದೀಯಾ?’

‘ಚೆನ್ನಾಗಿದ್ದೀನಿ ಫಾದರ್. ಆದರೆ ನಾನೀಗ ಹಿಂದಿನ ಗಿಲ್ಬರ್ಟ್ ಅಲ್ಲ. ಆನಂದ ರಾವ್ ಎಂದು ಹೆಸರು ಬದಲಾಯಿಸಿಕೊಂಡಿದ್ದೇನೆ’.

‘ಆನಂದರಾವ್ ಹೆಸರು ಚೆನ್ನಾಗಿದೆ. ಆದರೆ ನೀನು ನಿಜಕ್ಕೂ ಆನಂದವಾಗಿದ್ದೀಯಾ?’

‘ನೋಡಿದರೆ ಕಾಣ್ಲಲ್ವೇ ಫಾದರ್? ನಾನು ಸದಾ ಆನಂದವಾಗಿದ್ದೇನೆ’.

‘ಗಿಲ್ಬರ್ಟ್, ನಿನಗೆ ಹಿಂದಿನ ಫಾದರ್‌ರಿಂದ ಅನ್ಯಾಯವಾಗಿದೆ. ಅದನ್ನು ಸರಿಪಡಿಸಲೆಂದೇ ನಾನು ಬಂದಿದ್ದೇನೆ’.

‘ಹೇಗೆ ಸರಿಪಡಿಸುತ್ತೀರಿ ಫಾದರ್?’

‘ನೀನು ಮತ್ತು ನರ್ಸಮ್ಮ ಚರ್ಚಲ್ಲಿ ಮದುವೆಯಾಗಬೇಕು. ಆಗ ನೀವಿಬ್ಬರೂ ಕ್ರಿಶ್ಚಿಯನ್ನರಾಗುತ್ತೀರಿ. ಕಳೆದುಹೋದ ಬಾಂಧವ್ಯವೆಲ್ಲಾ ಮರಳಿ ದೊರೆಯುತ್ತದೆ. ಅದಕ್ಕೆಂದೇ ಜೀಸಸ್ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ’.

‘ಯಾಕೆ ಫಾದರ್? ನಾವು ಹೀಗೆಯೇ ಇದ್ದರೆ ಏನಾಗುತ್ತದೆ?’

‘ನಿಮಗೆ ಹುಟ್ಟುವ ಮಕ್ಕಳಿಗೆ ಧರ್ಮವೇ ಇಲ್ಲವೆಂದಾಗುತ್ತದೆ. ಯೋಚಿಸು’.

ಗಿಲ್ಬರ್ಟ್ ಗಹಗಹಿಸಿ ನಕ್ಕ.

‘ಫಾದರ್, ನನ್ನನ್ನು ಮದುವೆಯಾಗುವಾಗ ನರ್ಸಮ್ಮ ಒಂದು ವಚನ ಬಯಸಿದಳು’.

‘ಏನದು ವಚನ?’

‘ನಾನು ಮತ್ತೆ ಕ್ರಿಶ್ಚಿಯನ್ ಆಗಬಾರದೆಂದು’.

‘ನೀನು ವಚನ ಕೊಟ್ಟೆಯಾ?’

‘ಚರ್ಚಿನಿಂದ ನನ್ನನ್ನು ಉಚ್ಚಾಟಿಸಿದ ದಿನವೇ ನಾನು ದೃಢ ನಿರ್ಧಾರ ಮಾಡಿದೆ. ಮರಳಿ ಮಾತೃ ಧರ್ಮಕ್ಕೆ ಹೋಗುವ ಪ್ರಶ್ನೆಯೇ ಇಲ್ಲವೆಂದು’.

‘ಹಾಗಾದರೆ ಈಗ ನಿನ್ನ ದೇವರು ಯಾರು?’

ಗಿಲ್ಬರ್ಟ್ ಕಣ್ಣು ಮುಚ್ಚಿಕೊಂಡ.

‘ಫಾದರ್, ನನಗೀಗ ಅಯ್ಯಪ್ಪನಲ್ಲಿ ಜೀಸಸ್‌ನನ್ನು ಕಾಣಲು ಸಾಧ್ಯವಾಗಿದೆ. ಅಯ್ಯಪ್ಪ ಭಕ್ತರೆಲ್ಲಾ ನನ್ನ ಬಂಧುಗಳಾಗಿದ್ದಾರೆ’.

‘ನಿನಗೆ ಹುಟ್ಟಲಿರುವ ಮಕ್ಕಳ ಗತಿಯೇನು?’

‘ಪ್ರಪಂಚ ವಿಶಾಲವಾಗಿದೆ ಫಾದರ್. ಅವರು ಇಷ್ಟಬಂದಂತೆ ಬದುಕುತ್ತಾರೆ’.

ಫಾದರ್ ಸಿಟ್ಟಿನಿಂದ ಹೇಳಿದರು.

‘ನೀನು ಲ್ಯೂಸಿಫರ್‌ನ ಕೆಟ್ಟ ಪ್ರಭಾವಕ್ಕೆ ಒಳಗಾಗಿದ್ದೀಯ. ಸತ್ತಮೇಲೆ ನೀನು ಅವನ ಕತ್ತಲ ಸಾಮ್ರಾಜ್ಯದಲ್ಲಿ ಶಿಕ್ಷೆ ಅನುಭವಿಸುತ್ತೀಯಾ’.

ಗಿಲ್ಬರ್ಟ್‌ಗೆ ಸಿಟ್ಟು ಬರಲಿಲ್ಲ. ಕೈಜೋಡಿಸಿ ‘ನಿಮ್ಮ ಆಶೀರ್ವಾದ ಫಾದರ್’ ಎಂದ.

ಪಾದ್ರಿಗಳು ಕೋಪದ ಭರದಲ್ಲಿ ಶಾಪ ಕೊಟ್ಟು ದಾಪುಗಾಲು ಹಾಕುತ್ತಾ ಹೊರಟು ಹೋದರು.

***

ಅಜ್ಜಿ ಕತೆ ನಿಲ್ಲಿಸಿತು.

ಪತ್ರಕರ್ತ ಕುತೂಹಲ ತಡೆಯಲಾರದೆ ಕೇಳಿದ.

‘ಮುಂದೇನಾಯಿತು ಅಜ್ಜಿ?’

‘ಆಗೋದೇನು ಮಗಾ? ಯಾರು ಯಾರನ್ನು ಮದುವೆಯಾದರೂ ಆಗೋದು ಮಕ್ಕಳೇ ಅಲ್ವಾ? ಗಿಲ್ಬರ್ಟ್, ನರ್ಸಮ್ಮಳಿಗೂ ಮಕ್ಕಳಾದರು. ಒಂದಲ್ಲ, ಎರಡಲ್ಲ, ಮೂರು. ಹೆಂಡತಿ ನರ್ಸಮ್ಮಳಲ್ಲವೇ? ಅಲ್ಲಿಗೆ ನಿಲ್ಲಿಸಿ ಬಿಟ್ಟಳು’.

‘ಮೂರು ಮಕ್ಕಳಾ? ಇದೊಳ್ಳೆ ವಿಚಿತ್ರವಾಗಿದೆ. ನಾನು ನಿಮ್ಮ ತವರೂರಿಗೆ ಹೋಗಿ ಗಿಲ್ಬರ್ಟ್ ಮತ್ತು ನರ್ಸಮ್ಮಳನ್ನು ಭೇಟಿಯಾಗಬೇಕಿದೆ. ಅದೆಲ್ಲೆಂದು ಹೇಳುತ್ತೀರಾ?’

ಅಜ್ಜಿ ಗೋಡೆಯ ಮೇಲೆ ತೂಗು ಹಾಕಿದ್ದ ಒಂದು ಭಾವಚಿತ್ರವನ್ನು ನೋಡಿ ಹನಿಗಣ್ಣಾದಳು.

‘ಗಿಲ್ಬರ್ಟ್ ಬದುಕಿಲ್ಲ. ಅವನನ್ನು ಮದುವೆಯಾದ ನರ್ಸಮ್ಮ ನಾನೇ!’

**ಪ್ರತಿಕ್ರಿಯಿಸಿ: feedback@sudha.co.in**